ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ, ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ಕೆಲವು ಸಂದರ್ಭದಲ್ಲಿ ಈ ಒಂದು ಭಾಗದಲ್ಲಿ ಮಾತ್ರವಲ್ಲವೆ ಎಲ್ಲಾ ಭಾಗದಲ್ಲಿ ಸರ್ಕಾರದ ಜಮೀನುಗಳಲ್ಲಿ ಯಾರ್ಯಾರೋ ಕಟ್ಟಿಕೊಂಡಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ತಾವು ಈಗಾಗಲೇ ಮಾಲೀಕರಿಗೆ ಸಂಬಂಧಪಟ್ಟಹಾಗೆ ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ, ನಾವು ಇದನ್ನು ಚರ್ಚೆ ಮಾಡಬೇಕಾಗುತ್ತದೆ. ಬಿ.ಡಿ.ಎ. ಅಧಿಕಾರಿಗಳ ಜೊತೆಯಲ್ಲಿ ಈ ವಿಚಾರವಾಗಿ ಚರ್ಚೆ ಮಾಡಿ ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನಕ್ಕೆ ಪರಿಶೀಲನೆ ಮಾಡುತ್ತೇವೆ.

ಔ) ಬೆಂಗಳೂರಿನ ಚಿಕ್ಕಪೇಟೆ ವಿಧಾನ ಸಭಾಕ್ಷೇತ್ರದಲ್ಲಿ ಅಸಮರ್ಪಕ ನೀರು ಸರಬರಾಜು.

ಶ್ರೀ ಪಿ.ಹೆಚ್.ಪ್ರಕಾಶ್ (ಚಿಕ್ಕಪೇಟೆ): ಅಧ್ಯಕ್ಷರೆ, ಬೆಂಗಳೂರು ಮಹಾನಗರದಲ್ಲಿ ಬೆಂಗಳೂರು ಜಲಮಂಡಳಿಯವರು ನಗರದಲ್ಲಿ ದಿನ ಬಿಟ್ಟು ದಿನ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಆದರೆ ಹಳೆಯ ಸಿಟಿಯಲ್ಲಿ ಕಳೆದ ಒಂದು ತಿಂಗಳಿಂದ ನೀರು ಸರಬರಾಜು ವ್ಯವಸ್ಥೆ ಸರಿಯಾಗಿಲ್ಲ. ನಮ್ಮ ಹಬ್ಬಹರಿದಿನಗಳು ಬಂದಾಗ ಆ ದಿನ ಸಂಪೂರ್ಣ ನೀರನ್ನು ನಿಲ್ಲಿಸತಕ್ಕಂಥ ಒಂದು ವಾತಾವರಣ ಅಲ್ಲಿ ಸೃಷ್ಟಿಯಾಗಿದೆ. ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆಂಪಾಪುರ ಅಗ್ರಹಾರದಲ್ಲಿ ಒಂದು ಗುಂಡಿ ನೀರಿಗೆ 50 ಪೈಸೆಯಂತೆ ಮಾರಾಟವಾಗಿದೆ. ಇದರ ಬಗ್ಗೆ ಅನೇಕ ದೂರುಗಳನ್ನು ಕೊಟ್ಟರೂ ಕೂಡ ವಾಟರ್ ಸಪ್ಲೈನವರು, ಪಂಪ್ ಕೆಟ್ಟು ಹೋಗಿರುವುದರಿಂದ ಅದನ್ನು ರಿಪೇರಿ ಮಾಡಿದಾದ ಮೇಲೆ ನೀರು ಸರಬರಾಜು ಮಾಡುತ್ತೇವೆ ಎನ್ನುವ ಉತ್ತರ ನೀಡುತ್ತಾರೆ. ಸುಮಾರು ಕಳೆದ ಎರಡು ವರ್ಷಗಳಿಂದಲೂ ಮನೆಗಳಿಗೂ ನೀರು ಬರುತ್ತಿಲ್ಲ. ಬೀದಿ ನಲ್ಲಿಗಳಲ್ಲಿ ರಾತ್ರಿ ಸುಮಾರು ಎರಡು ಗಂಟೆಗೆ ನೀರು ಸರಬರಾಜು ಮಾಡಿ ಬೆಳಿಗಿನ ಜಾವ 5 ಗಂಟೆಗೆ ನೀರು ನಿಲ್ಲಿಸುತ್ತಾರೆ, ಇಂತಹ ಸಮಯದಲ್ಲಿ ಹೆಣ್ಣು ಮಕ್ಕಳು ಹೇಗೆ ನೀರು ಹಿಡಿಯುವುದಕ್ಕೆ ಸಾಧ್ಯ? ಕೊನೆ ಪಕ್ಷ ನೀರು ಹಿಡಿಯುವುದಕ್ಕೆ ಬಂದಂಥ ಸಮಯದಲ್ಲಿ ದರೋಡೆಕಾರರು, ರೌಡಿಗಳ ಹಾವಳಿಯಿಂದ ಬಹಳ ತೊಂದರೆಪಡುತ್ತಾರೆ. ಮಿನಿ ವಾಟರ್ ಟ್ಯಾಂಕ್ ಎಂದು ಏನು ಇದೆ ಬೋರ್‌ವೆಲ್‌ಗಳೆಲ್ಲ ಮಿನಿ ವಾಟರ್ ಟ್ಯಾಂಕ್ ಸ್ಕೀಮ್ ಎಂದು ಮಾಡಿದ್ದಾರೆ. ಆ ಬೋರ್‌ವೆಲ್‌ಗಳೆಲ್ಲಾ ಕೆಟ್ಟು ಹೋಗಿದೆ, ಅದನ್ನು ರಿಪೇರಿ ಮಾಡಿಲ್ಲ. ವಾಟರ್ ಸಪ್ಲೈನವರು ಕೆ.ಜಿ.ಬಿ.ಗೆ ಸುಮಾರು ಲಕ್ಷಾಂತರ ರೂಪಾಯಿ ಬ್ಯಾಲೆನ್ಸ್ ಉಳಿಸುವವರೆಗೂ ವಾಟರ್ ಸಪ್ಲೈ ಎಲ್ಲಾ ಕಡೆ ನಿಲ್ಲಿಸಿ ಹೋಗಿ, ಕರೆಂಟ್ ಕಟ್ ಮಾಡಿಸಿಬಿಡುತ್ತಾರೆ. ಇಂತಹ ಪರಿಸ್ಥಿತಿ ಇರುವ ಬೆಂಗಳೂರಿನ ಸಿಟಿಗಳಾದ ಚಿಕ್ಕಪೇಟೆ, ಸಿದ್ದಾಪುರ, ಸಿದ್ದಾರಾಜನಗರ, ಗಾಂಧಿನಗರ ಮತ್ತು ಇನ್ನಿತರ ಕಡೆಗಳಲ್ಲಿ ತೊಂದರೆಯಾಗಿದೆ. ಸುಮಾರು 30 ವರ್ಷಗಳ ಹಿಂದೆ ಈ ಏರಿಯಾದಲ್ಲಿ ಜನಸಂಖ್ಯೆ ಬಹಳ ಚಿಕ್ಕದಾಗಿರುವುದರಿಂದ ಬಹಳಷ್ಟು ಏರಿಯಾ ಏರಿಯಾಗಳಲ್ಲಿ ವಾಟರ್ ಟ್ಯಾಂಕ್ ಚಿಕ್ಕದಾಗಿರುವುದರಿಂದ ಕೆಲವು [illegible]

ಎಲ್ಲಾ ಖಾಲಿಯಾಗುತ್ತಿದೆ. ಆದ್ದರಿಂದ ಆ ವಾಟರ್ ಟ್ಯಾಂಕ್‌ನ್ನೂ ಕೂಡ ಜನಸಂಖ್ಯೆಗೆ ಅನುಗುಣವಾಗಿ, ಅದನ್ನು ಬದಲಾವಣೆಯನ್ನಾಗಿ ಮಾರ್ಪಡಿಸಬೇಕು. ಇದರ ಜೊತೆಗೆ ಮೊನ್ನೆ ಅಪಿನ್ಯೂರಸ್ಟೆಯಲ್ಲಿ ನಾಮ ಫಲಕಗಳನ್ನು ಹೊಡೆದು ಹಾಕಿರುವ ಪರಿಣಾಮದಿಂದಾಗಿ ಬಹಳ ದೊಡ್ಡ ಗಲಾಟೆಯಾಯಿತು ಎನ್ನುವ ವಿಷಯವನ್ನೂ ಕೂಡ ನಾನು ಕೇಳಿದ್ದೇನೆ. ತಾವು ಇದರ ಬಗ್ಗೆ ಉತ್ತರ ಕೊಡಿಸುತ್ತೇನೆಂದು ಹೇಳಿದಿರಿ, ಇನ್ನು ಆ ಬಗ್ಗೆ ಉತ್ತರ ಕೊಡಿಸಿಲ್ಲ... ದಯಮಾಡಿ ಅದರದು ಹಾಗೂ ಈ ವಾಟರ್ ಸಪ್ಲೈದು ಎರಡಕ್ಕೆ ಉತ್ತರ ಕೊಡಿಸಿ.

ಅಧ್ಯಕ್ಷರು: ನೋಡಿ ಆ ವಿಷಯವೇ ಬೇರೆ ಈ ವಿಷಯವೇ ಬೇರೆ. ಅದನ್ನೂ ಕೂಡ ಉತ್ತರ ಕೊಡಿಸುತ್ತೇನೆ. ಈಗ ಮೊದಲನೆಯದಾಗಿ ವಾಟರ್‌ದ್ದು ನಂತರ ನಾಮಫಲಕದ್ದು ನಿಧಾನಕ್ಕೆ ಕೊಡಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಅಧ್ಯಕ್ಷರೆ ಮೂರು ವಿಧಾನ ಸಭಾ ಕ್ಷೇತ್ರಗಳಾದ ಜಾಮರಾಜಪೇಟೆ, ಚಿಕ್ಕಪೇಟೆ, ಗಾಂದಿನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಇದು ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಖಾತೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಹಾಗೂ ಜಲಮಂಡಳಿ ಅಧ್ಯಕ್ಷರ ಜೊತೆ ನಾನು ಖುದ್ದಾಗಿ ಮಾತನಾಡಿ, ಈ ಮೂರು ಕ್ಷೇತ್ರಗಳಿಗೆ ಕುಡಿಯುವ ನೀರಿನ ಸರಬರಾಜಿಗೆ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಪ್ರಯತ್ನ ಮಾಡುತ್ತೇನೆ. ಹಾಗೂ ಮಾನ್ಯ ಸದಸ್ಯರು, ಮಿನಿವಾಟರ್ ಸ್ಕೀಮ್ ಹಾಗೂ ಬೋರ್‌ವೆಲ್‌ಗಳ ರಿಪೇರಿ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕೂಡ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ.ನವರು ಕೆ.ಇ.ಬಿ.ಗೆ ಸುಮಾರು 128 ಕೋಟಿ ರೂ.ಗಳನ್ನು ಬಾಕಿ ಕೊಡತಕ್ಕಂಥದ್ದು ಇದೆ. ಹೀಗಿದ್ದರೂ ಕೂಡ ನಾವು ನಿರಂತರ ಸರಬರಾಜು ನಿಲ್ಲಿಸಿಲ್ಲ, ಒಂದು ಪಕ್ಷ ಆ ರೀತಿ ಆಗಿದ್ದರೆ ಅದನ್ನು ಸರಿಪಡಿಸಿ ಕೊಡುತ್ತೇನೆ ಎನ್ನುವ ಭರವಸೆ ಕೊಡುವುದಷ್ಟೇ ಅಲ್ಲದೆ ಅದನ್ನು ಮಾಡಿಸುತ್ತೇನೆ.

(ಕ) ವಿಜಯಪುರ ವಿಧಾನ ಸಭಾಕ್ಷೇತ್ರದಲ್ಲಿ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಉಪನ್ಯಾಸಕರನ್ನು ನೇಮಿಸುವ ಬಗ್ಗೆ